ಕಾವ್ಯಸಂಕ



ಆರಿಫ್ ರಾಜಾ

ಕವಯಿತ್ರಿ, ಅನುವಾದಕಿ
**ನ್ಯುಯೆನ್ ಥಿ ಥುಯ್ ಲಿನ್**
ದೇಶ: **ವಿಯೆಟ್ನಾಂ**

# 'ನಿಗೂಢ ಶಕ್ತಿಗೆ ನನ್ನ ನಮನವೇ ಕವಿತೆ'

1991ರಲ್ಲಿ ಜನಿಸಿದ ನ್ಯುಯೆನ್ ಥಿ ಥುಯ್ ಲಿನ್ ವಿಯೆಟ್ನಾಮಿನ ಯುವ ಕವಯಿತ್ರಿ ಮತ್ತು ಅನುವಾದಕಿ. ಪ್ರಸ್ತುತ ವಿಯೆಟ್ನಾಮಿನ ಹೈ ಫೌಂಗ್ ನಗರದಲ್ಲಿ ವಾಸವಾಗಿದ್ದಾರೆ. ಹನೋಯ್ ರಾಷ್ಟ್ರೀಯ ಆರ್ಥಿಕ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಪದವಿ ಪಡೆದಿರುವ ಇವರು The Gold Moon of 68 poetry Prize ಪಶಸ್ತಿ ಪುರಸ್ಕೃತರು. ಅನೇಕ ಅಂತರರಾಷ್ಟ್ರೀಯ ಜರ್ನಲ್‌ಗಳಲ್ಲಿ ಇವರ ಕವಿತೆಗಳು ಪ್ರಕಟವಾಗಿವೆ.

